**ಓ ಎಸ್ ನಂ11/2015**
**ಡಿ. ಡಬ್ಲ್ಯೂ ಃ 3**

**ದಿಃ 14.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ವಾದಿ ಪರ ಶ್ರೀ ಎನ್ ಕೆ ಎನ್ ವಕೀಲರಿಂದ ಃ**

ನಾನು ವ್ಯವಸಾಯ ಮಾಡುತ್ತೇನೆ. ಪಟೇಲ್ ಆಂಜನಪ್ಪ ಇವರು ಇದ್ದಾಗಲೇ ಮೌಖಿಕವಾಗಿ ಭಾಗ ಮಾಡಿಕೊಂಡಿದ್ದರು. ಆ ರೀತಿಯಾಗಿ ಭಾಗವಾಗಿ 35 ವರ್ಷಗಳಾ ಮೇಲೆ ಆಗಿದೆ. ಆಂಜನಪ್ಪ ಇವರ ದೊಡ್ಡ ಹೆಂಡತಿ ಮತ್ತು ಚಿಕ್ಕ ಹೆಂಡತಿ ಮಕ್ಕಳು ಆ ರೀತಿಯ ಮೌಖಿಕ ವಿಭಾಗ ಮಾಡಿಕೊಂಡಿದ್ದರು. ವಿಭಾಗವಾದ ದಿನಾಂಕ ಗೊತ್ತಿಲ್ಲ. ಮೌಖಿಕ ವಿಭಾಗ ಮನೆಯಲ್ಲಿ ಆಗಿತ್ತು. ಅದರ ಪ್ರಕಾರ ಎಂ ಆರ್ ಆಗಿ ಖಾತೆಗಳು ಬದಲಾವಣೆ ಆಗಿವೆ. ವಾದಿಯ ತಾಯಿಗೆ ಸ.ನಂ 60/1 ರಲ್ಲಿ 3 ಎಕರೆ 29 ಗುಂಟೆ, ಸ.ನಂ. 213 ರಲ್ಲಿ 33 ಗುಂಟೆ ಕೊಟ್ಟಿದ್ದರು. ಜಯರಾಮು ಇವರಿಗೆ 3 ಎಕರೆ 22 ಗುಂಟೆಯನ್ನು ಸ.ನಂ. 59/3 ರಲ್ಲಿ, ಸ.ನಂ. 213 ರಲ್ಲಿ 33 ಗುಂಟೆಯನ್ನು ಕೊಟ್ಟಿದ್ದರು. ಪಟೇಲ್ ಆಂಜನಪ್ಪ ಇವರು ಸುಮಾರು 40 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ವಿಭಾಗವಾದ 10-12 ವರ್ಷಗಳ ನಂತರ ಆಂಜನಪ್ಪ ಇವರು ತೀರಿಕೊಂಡಿದ್ದಾರೆ.

ಮೌಖಿಕ ವಿಭಾಗವಾದ ಪ್ರಕಾರ ಆಂಜನಪ್ಪ ಇವರು ಮೃತರಾದ ನಂತರ ಎಂ ಆರ್ ಮಾಡಿಕೊಂಡಿದ್ದಾರೆ. ಖಾತೆಗಳು ಪೌತಿ ಖಾತೆ ಮೂಲಕ ಆಗಿವೆ ಎಂದರೆ ಸರಿ. ಆಸ್ತಿಗಳು ಪೋಲಾಗುತ್ತವೆ ಎಂದು ಜಂಟಿ ಖಾತೆ ಇಟ್ಟುಕೊಂಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಮೌಖಿಕ ವಿಭಾಗವಾದಾಗ ನಾವೆಲ್ಲರೂ ಚಿಕ್ಕವರಿದ್ದೇವು. ಮೌಖಿಕ ವಿಭಾಗದ ಬಗ್ಗೆ ಖುದ್ದಾಗಿ ನನಗೆ ಗೊತ್ತಿಲ್ಲ, ದಾಖಲೆಯನ್ನು ನೋಡಿ ಹೇಳುತ್ತಿದ್ದೇನೆ. ದಾವಾ ಸ್ವತ್ತುಗಳಲ್ಲಿ ವಾದಿ ಮತ್ತು ಪ್ರತಿವಾದಿಗಳು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ಅವರವರ ಭಾಗಕ್ಕೆ ಬಂದ ಸ್ವತ್ತುಗಳಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ. ನಿ ಡಿ 31 ಇದನ್ನು ಎರಡು ಪ್ರತಿಗಳಲ್ಲಿ ಮಾಡಲಾಗಿತ್ತು. ನಿ ಡಿ 31 ರ ಪ್ರಕಾರ ಯಾವುದೆ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ.

ನಿ ಡಿ 31 ಇದನ್ನು ಪಾಪಣ್ಣ ವಕೀಲರ ಆಫೀಸ್ ನಲ್ಲಿ ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಜಯಮ್ಮ ಮತ್ತು ಅವರ ಮಕ್ಕಳಾದ ಚೌಡಮ್ಮ, ಸರಸ್ವತಿ, ಲೀಲಾವತಿ , ಜಯರಾಮನ ಹೆಂಡತಿ ಜಯಲಕ್ಷ್ಮಿ ಇದ್ದರು. ಅವರನ್ನು ಹೊರತುಪಡಿಸಿ ಕುಟುಂಬ ಸದಸ್ಯರು ಇರಲಿಲ್ಲ, ಸಾಕ್ಷಿದಾರರು ಇದ್ದರು ಎಂದು ಸಾಕ್ಷಿ ಹೇಳುತ್ತಾರೆ. ನಿ ಡಿ 31 ರಂತೆ ಯಾವುದೆ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಗಳು ಸೇರಿಕೊಂಡು ಆ ವಿಭಾಗಪತ್ರವನ್ನು ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. ಸಾಕ್ಷಿದಾರರಾಗಿ ಮುನಿಯಪ್ಪ, ಪರಮಶಿವಯ್ಯ, ವಿ ಜಿ ದೊಡ್ಡಿಯ ರುದ್ರಯ್ಯ , ಪಾಪಣ್ಣ ಇವರ ಆಫೀಸ್ ನಲ್ಲಿದ್ದ ರಂಗಯ್ಯ ಇವರು ಇದ್ದರು. ಈ ಕೇಸ್ ಗಾಗಿ ಆ ವಿಭಾಗಪತ್ರವನ್ನು ಸೃಷ್ಟಿಸಿದ್ದೇವೆ

ಎಂದರೆ ಸರಿಯಲ್ಲ. ವಿಭಾಗಪತ್ರದಲ್ಲಿ ಏನು ಬರೆದಿದೆ ಎಂದು ಗೊತ್ತು. ಜಯಮ್ಮ ನಿಗೆ ಸ.ನಂ.60/1 ರಲ್ಲಿ 3 ಎಕರೆ 29 ಗುಂಟೆ, ಸ.ನಂ. 213 ರಲ್ಲಿ 33 ಗುಂಟೆ , ಚೌಡಮ್ಮ ನಿಗೆ ಭಾಗ ಕೊಟ್ಟಿಲ್ಲ, ಅವರ ಮಗ ಜಯರಾಮನ ಹೆಂಡತಿ ಜಯಲಕ್ಷ್ಮಿ ಇವರಿಗೆ ಸ.ನಂ. 59/3 ರಲ್ಲಿ 3 ಎಕರೆ 22 ಗುಂಟೆ, ಸ.ನಂ. 213 ರಲ್ಲಿ 33 ಗುಂಟೆ ಕೊಟ್ಟಿತ್ತು. ಸ.ನಂ. 214 ರಲ್ಲಿ 2 ಎಕರೆ 9 ಗುಂಟೆ ಜಯರಾಮನ ಹೆಂಡತಿಗೆ ಕೊಟ್ಟಿತ್ತು. ಆ ಸ್ವತ್ತನ್ನು ಜಯರಾಮು ಇವನು ಖರೀದಿಸಿದ್ದನು. 9 ನೆ ಪ್ರತಿವಾದಿ ನನ್ನ ಅಕ್ಕನಾಗಬೇಕು. ಅವರು ಯಾವುದೆ ಸ್ವತ್ತನ್ನು ಮಾರಾಟ ಮಾಡಿಲ್ಲ. ಸೌಭಾಗ್ಯಮ್ಮ ನನ್ನ ಅಕ್ಕನಾಗಬೇಕಾಗಿದ್ದರಿಂದ ಅವರಿಗೆ ಅನೂಕೂಲವಾಗಲಿ ಎಂಬ ಉದ್ದೇಶದಿಂದ ನಿ ಡಿ 31 ನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ಯಾವುದೆ ವಿಭಾಗ ಪತ್ರ ಆಗಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**

ಓ ಎಸ್ ನಂ11/2015
ಡಿ. ಡಬ್ಲ್ಯೂ : 4

**ದಿಃ 14.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ ಎನ್ ಕೆ ಎನ್ ವಕೀಲರಿಂದ :**

ನಾನು ಮೊದಲು ಸರ್ಕಾರಿ ನೌಕರನಾಗಿದ್ದೇನು, ನಿವೃತ್ತನಾದ ನಂತರ ವ್ಯವಸಾಯ ಮಾಡುತ್ತಿದ್ದೇನೆ. ಈಗ ನಾನು ಯಲಚುಗುಪ್ಪೆಯಲ್ಲಿ ವಾಸ ಮಾಡುತ್ತಿದ್ದೇನೆ. ಪಟೇಲ್ ಆಂಜನಪ್ಪ ಇವರ ಕುಟುಂಬದಲ್ಲಿ ಅವರು ಬದುಕಿದ್ದಾಗಲೇ ಬಾಯಿ ಮಾತಿನ ಮೂಲಕ ವಿಭಾಗವಾಗಿತ್ತು. 1985 ರಲ್ಲಿ ಆ ರೀತಿಯ ಭಾಗವಾಗಿರಬಹುದು. ಆ ಸಮಯದಲ್ಲಿ ನಾನು ಇರಲಿಲ್ಲ. ಆ ಸಮಯದಲ್ಲಿ ನಾನು ಚಿಕ್ಕವನಾಗಿದ್ದೇನು, ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಬಾಯಿ ಮಾತಿನ ವಿಭಾಗವಾಗಿದ್ದು ನನಗೆ ಗೊತ್ತಿಲ್ಲ. ಅವರ ಮನೆಯವರು ಹೇಳಿದ್ದರು. ನನ್ನ ಮುಖ್ಯ ವಿಚಾರಣೆಯಲ್ಲಿ ಅವರ ಕುಟುಂಬದವರಿಂದ ನನಗೆ ಗೊತ್ತಾಯಿತು ಎಂದು ಬರೆಸಿಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಬರೆಸಿರುವುದು ಸತ್ಯವಾಗಿರುತ್ತದೆ. ಜಯರಾಮ ಇವರು ನನಗೆ ಬಾಯಿ ಮಾತಿನ ಮೂಲಕ ವಿಭಾಗವಾಗಿತ್ತು ಎಂದು ಹೇಳಿದ್ದರು, ಆದರೆ ಯಾವಾಗ ಆಗಿತ್ತು ಎಂದು ನನಗೆ ನೆನಪಿಲ್ಲ. ಸ.ನಂ. 59 ರಲ್ಲಿ 3 ಎಕರೆ ಚಿಲ್ಲರೆ ಗುಂಟೆಯಲ್ಲಿ ಜಯರಾಮ ಸ್ವಾಧೀನದಲ್ಲಿದ್ದರು. ಸ.ನಂ. 214 ರಲ್ಲಿ 2 ಎಕರೆಯಲ್ಲಿ ಸ್ವಾಧೀನದಲ್ಲಿದ್ದರು. ಬೇರೆಯವರಿಗೆ ಯಾವ ಸ.ನಂಬರ್ ಹೋಗಿದೆ ಎಂದು ನನಗೆ ಗೊತ್ತಿಲ್ಲ. ಕಂದಾಯ ದಾಖಲೆಗಳು ಯಾರಿಂದ ಯಾರ ಹೆಸರಿಗೆ ಬದಲಾವಣೆ ಆಗಿವೆ ಎಂದು ನನಗೆ ಗೊತ್ತಿಲ್ಲ. 1994 ರಲ್ಲಿ ವಿಭಾಗಪತ್ರವು ಲಾಯರ್ ಪಾಪಣ್ಣ ಇವರ ಆಫೀಸ್ ನಲ್ಲಿ ಆಗಿರುತ್ತದೆ. ಜಯಮ್ಮ, ಜಯಲಕ್ಷ್ಮಮ್ಮ ಇದ್ದರು ಉಳಿದ ಕುಟುಂಬ ಸದಸ್ಯರ ಹೆಸರು ಗೊತ್ತಿಲ್ಲ. ಯಾರು ಯಾರು ಇದ್ದರು ಎಂದು ನನಗೆ ಖಚಿತವಾಗಿ ಹೇಳಲಾಗುವುದಿಲ್ಲ. 12.12.1994 ರಂದು ಯಾವುದೆ ವಿಭಾಗಪತ್ರ ಆಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸೃಷ್ಟಿಸಿಕೊಂಡ ವಿಭಾಗಪತ್ರಕ್ಕೆ ನನ್ನಿಂದ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಸೃಷ್ಟಿಸಿದ ವಿಭಾಗಪತ್ರವನ್ನು ಸಹ ನಾಲ್ಕಾರು ರೀತಿಯಲ್ಲಿ ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಸಾಕ್ಷಿದಾರರಾದ ಪೈಕಿ ಪರಮಶಿವಯ್ಯ ಮಾತ್ರ ಗೊತ್ತು. ಇನ್ನೊಬ್ಬರು ಸಾಕ್ಷಿದಾರರು ಇದ್ದರು, ಅವರ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಮಾಗಡಿ.**